ಇನ್ನು ಪಂಪ್‌ಸೆಟ್ಟುಗಳನ್ನು ಅಳವಡಿಸಿದ ಮೇಲೆ ಅವುಗಳು ಕೆಟ್ಟುಹೋಗುತ್ತವೆಂದು ಮಾನ್ಯ ಸದಸ್ಯರು ಹೇಳಿದರು. ಆ ರೀತಿ ಕೆಟ್ಟುಹೋದ ಮೇಲೆ ನಾವು ಸರಿ ಮಾಡುತ್ತಿದ್ದೇವೆ. ಇದು ಒಂದು ರೂಪದ ಅಖಿಂಡ ಕಾರ್ಯಕ್ರಮವಾಗಿದೆ. ರಿಪೇರಿ ಮಾಡಿಸುವುದಕ್ಕಾಗಿಯೇ ನಾವು ಪ್ರತಿ ಜಿಲ್ಲೆಯಲ್ಲಿಯೂ ಒಂದು ಸೆಲ್‌ನ್ನು ಇಟ್ಟಿದ್ದೇವೆ, ನಾವು ಪಂಪ್‌ಗಳು ಕೆಟ್ಟಾಗಲೆಲ್ಲಾ ನಿಸ್ಸಹಾಯಕರಾಗಿರದೆ ಶ್ರದ್ಧೆಯಿಂದ ರಿಪೇರಿ ಮಾಡಿಸುತ್ತಿದ್ದೇವೆ. ಆದ ಕಾರಣ ಇದರ ಬಗ್ಗೆ ತಮ್ಮ ವಿಶ್ವಾಸವೂ ಜಾಸ್ತಿ ಇದೆ ಎಂದು ನಾನು ತಿಳಿದುಕೊಂಡಿದ್ದೇನೆ.

ಅಧ್ಯಕ್ಷರು.—ಶ್ರೀ ಭಾಪುರಾವ್ ದೇಶಪಾಂಡೆಯವರ ಗಮನ ಸೆಳೆಯುವ ಸೂಚನೆಯನ್ನು ನಾನು ಮಾನ್ಯ ಮಂತ್ರಿಗಳ ಅಭಿಪ್ರಾಯದ ಪ್ರಕಾರ ನಾಳೆ ತೆಗೆದುಕೊಳ್ಳುತ್ತೇನೆ.

ಶ್ರೀ ಭಾಪೂರಾವ್ ದೇಶಪಾಂಡೆ.—ಆಗಬಹುದು.

(ii) *re* ; false certificates issued by the K.P.S.C.

ಶ್ರೀ ಡಿ. ದೇವರಾಜ ಅರಸ್ (ಮುಖ್ಯಮಂತ್ರಿಗಳು).—ಸಹಸ್ಯಾರು ಸರ್ಕಾರಿ ನೌಕರರು ತಮ್ಮ ಇಂಕ್ರಿಮೆಂಟ್ ಹಾಗೂ ಭಡ್ತಿಯನ್ನು ಪಡೆದುಕೊಳ್ಳುವ ಸಲುವಾಗಿ ಸುಳ್ಳು ಸರ್ಟಿಫಿಕೇಟ್‌ಗಳನ್ನು ಹಾಜರುಪಡಿಸಿದ ಬಗ್ಗೆ ನಾನು ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ :—

SRI D. DEVARAJ URS (Chief Minister).—I wish to make the following Statement :

The Karnataka Public Service Commission found, during the first week of March 1979 that a large number of blank certificate forms were missing. Therefore the Commission by its Notification dated 16th March 1979 published in the Gazette dated 22nd March 1979 indicated the serial numbers of the missing blank certificates with a request to unit officers to verify whether any of the officials in their units, had produced the certificates with the serial numbers of the missing blank certificates and if so, to make further verification under intimation to the commission.

The Joint Director of Land Records, Bangalore Division referred on 23rd February 1979 a specific complaint to the P.S.C. regarding issue of a false certificate to one of the officials of the Department of Survey Settlement and Land Records. On receipt of this complaint a letter was written by the Secretary, P.S.C, on 15th March 1979 to the Special Inspector-General of Police, Training and C.I.D. stating that in the recent past several incidents had been brought to the notice of the Commission wherein large number of false pass certificates pertaining to the service examinations were in circulation. Since the police could not take a statutory investigation on the basis of the D O, letter, the Secretary of the Commission was requested by the Police to make a regular complaint, Accordingly, the Deputy Secretary of the Karnataka Public Service Commission made a complaint on 19th March 1979 and a case in crime No. 184/79 under Section 381, 420 and 468 of the I.P.C. has been registered by the Police.

The complaint made by the Deputy Secretary, Karnataka Public Service Commission related to three instances of malpractices; two in respect of officials in the Department of Land Records and the third one in respect of the official of the Transport Department. Since the reference made by the Joint Director, Land Records mentioned the name of the Peon in the office of the Public Service Commission, it was suspected that the peon was responsible for the malpractices. The peon's house was searched by the Police on 22nd March 1979 and the police have found certain incriminating documents. The peon has been arrested on 30th March 1979, and produced in the court on 31st March 1979. He has been remanded to Judicial Custody upto 12th April 1979. Further investigation is in progress.

The Govenment servants who have obtained false certificates and have attempted to use them for the purpose of obtaining service benefits like increments, promotion, etc., can be prosecuted for violation of Section 471 of the IPC. Departmental proceedings can also be taken against them for the grave mis-conduct committed by them. Further action in this behalf will be taken after obtaining full details from the police who are investigating into this matter.

All these public servants who have been involved in this kind of obtaining false certificates and against whom complaints have been already there, they will be immediately suspended and further action will be taken against them.

In view of the fact that the matter is already before the appropriate Judicial authority, it would not be desirable to discuss this matter as it is sub-judice.

ಶ್ರೀ ಪಿ. ರಾಂದೇವ್.—ಈ ವಿಷಯು ಜುಡಿಷಿಯಲ್ ಅಥಾರಿಟಿ ಮುಂದೆ ಇರುವುದರಿಂದ ಇದರ ಬಗ್ಗೆ ನಾನು ಚರ್ಚೆ ಮಾಡುವುದಕ್ಕೆ ಹೋಗದೆ ಒಂದೆರಡು ವಿವರಣೆಗಳನ್ನು ಮಾತ್ರ ಕೇಳುತ್ತೇನೆ. ಒಂದನೆಯದಾಗಿ ಸರ್ಟಿಫಿಕೇಟ್ ಇಟ್ಟುಕೊಳ್ಳತಕ್ಕ ಜವಾಬ್ದಾರಿ ಯಾವ ಅಧಿಕಾರಿಗೆ ಇದೆ. ಆ ಅಧಿಕಾರಿಯಿಂದ ಹೇಗೆ ಅಲ್ಲಿಯ ಜವಾನನಿಗೆ ಅದು ಸಿಕ್ಕಿತು. ಈಗ ತಕ್ಷಣ ಜವಾನನನ್ನು ಸಸ್ಪೆಂಡ್ ಮಾಡಿ ಅವನ ಮೇಲೆ ಕೇಸು ಹಾಕಿದ್ದಾರೆ. ಈ ಸರ್ಟಿಫಿಕೇಟ್‌ಗಳು ಯಾವ ಅಧಿಕಾರಿಯ ಬಳಿ ಇರಬೇಕಾಗಿತ್ತೋ ಅವರ ಹತ್ತಿರ ಇಲ್ಲ. ಆದ್ದರಿಂದ ಆ ಅಧಿಕಾರಿಯ ಮೇಲೆ ಈ ಸಂಬಂಧದಲ್ಲಿ ಏನು ಕ್ರಮ ತೆಗೆದುಕೊಂಡಿದ್ದೀರಾ ? ಎರಡನೆಯದಾಗಿ. ಇದಕ್ಕೆ ಸಂಬಂಧಪಡದೇ ಇರತಕ್ಕಂತಹ ಅನೇಕ ಪಬ್ಲಿಕ್ ಸರ್ವೀಸ್ ಕಮಿಷನ್ ನೌಕರರನ್ನು ಪೋಲಿಸಿನವರು ಹೆದರಿಸುತ್ತಿದ್ದಾರೆ ಎಂದು ವರ್ತಮಾನ ಬಂದಿದೆ. ಅವರ ಮನೆಗಳಿಗೆ ಹೋಗಿ ತಪಾಸಣೆ ಮಾಡುತ್ತಿದ್ದಾರೆ. ಅದರಿಂದ ಅವರು ಗಾಬರಿಯಾಗಿದ್ದಾರೆ. ಈ ಕೇಸಿಗೆ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ನಾನು ಅಡ್ಡಿ ಬರುವುದಿಲ್ಲ. ಆದರೆ ಸಂಬಂಧಪಡದವರ ಮೇಲೆ ಏನೂ ಕ್ರಮ ತೆಗೆದುಕೊಳ್ಳದಂತೆ ನನಗೆ ಆಶ್ವಾಸನೆ ಕೊಡುತ್ತೀರಾ ?

ಶ್ರೀ ಟಿ. ಆರ್ ಶಾವಂಣ್ಣ:—ಸ್ವಾಮಿ ಇಲ್ಲಿ ಮಾನ್ಯ ಮಂತ್ರಿಗಳು ಕೊಟ್ಟಿರುವ ಹೇಳಿಕೆಯ ಪ್ರಕಾರ ಇದಕ್ಕೆ ಒಬ್ಬ ಜವಾನಾ ಕಾರಣ ಎಂದು ಹೇಳಿದ್ದಾರೆ. ನನಗೆ ತಿಳಿದ ಮಟ್ಟಿಗೆ ಜವಾನನ ಜೊತೆಗೆ ಇನ್ನೂ ಅನೇಕ ಜನಸೇರಿಕೊಂಡಿದ್ದಾರೆ, ಜವಾನ ಒಬ್ಬನೇ ಈ ಕೆಲಸವನ್ನು ಮಾಡಿಲ್ಲ ಎನ್ನತಕ್ಕಂತಹ ದೂರು ಇದೆ. ಇದರ ಬಗ್ಗೆ ಸಾಕಷ್ಟು ವಿಚಾರಣೆ ಮಾಡತಕ್ಕ ಅವಶ್ಯಕತೆ ಇದೆ. ಹಾಗೂ ಈಚೆಗೆ ಸರ್ಕಾರಕ್ಕೆ ಸಂಬಂಧಪಟ್ಟ ಬೇರೆ ಪರೀಕ್ಷೆಗಳಲ್ಲೂ ಮತ್ತು ಯೂನಿವರ್ಸಿಟಿಯಲ್ಲಿ ಕೊಡತಕ್ಕ ಪಾಸ್ ಸರ್ಟಿಫಿಕೇಟ್‌ಗಳಲ್ಲೂ

ಬೋಗಸ್ ಸರ್ಟಿಫಿಕೇಟ್‌ಗಳು ಇವೆ ಎಂದು ಹೇಳುತ್ತಿದ್ದಾರೆ. ಆದರಲ್ಲೂ ಮುಖ್ಯವಾಗಿ ಯೂನಿವರ್ಸಿಟಿ ಪೇಪರ್ಸ್ ವ್ಯಾಲ್ಯೂ ಮಾಡುವಾಗ, ಟ್ಯಾಬ್ಯುಲೇಟ್ ಮಾಡುವಾಗ ಹೆಚ್ಚು ಅಂಕಗಳನ್ನು ಟ್ಯಾಂಪರ್ ಮಾಡಿ ಅರ್ಹತೆ ಇಲ್ಲದೇ ಇರತಕ್ಕವರು ಪಾಸಾಗಿರತಕ್ಕದ್ದು ಹಿಂದೆ ನಡೆದಿದೆ. ಮತ್ತು ಕ್ಯಾಸ್ಟ್ ಸರ್ಟಿಫಿಕೇಟ್ ಕೊಡತಕ್ಕದ್ದರಲ್ಲಿ ಬೋಗಸ್ ಸರ್ಟಿಫಿಕೇಟ್‌ಗಳನ್ನು ಕೊಡುತ್ತಿದ್ದಾರೆಂದು ತಿಳಿದು ಬಂದಿದೆ. ಇದರಿಂದ ಅರ್ಹತೆ ಇಲ್ಲದವರು ಹೆಚ್ಚಿನ ಕೆಲಸಕ್ಕೆ ಸೇರುವ ಸಂದರ್ಭ ಇದೆ. ಆದ್ದರಿಂದ ಇದನ್ನು ವಿಚಾರಣೆ ಮಾಡಿ ಸಾಧ್ಯವಾದಷ್ಟು ಅಕ್ರಮಗಳನ್ನು ತಪ್ಪಿಸುವುದಕ್ಕೆ ಸೂಕ್ತ ಕ್ರಮವನ್ನು ತೆಗೆದು ಕೊಳ್ಳುತ್ತೀರ ?

SRI D. DEVARAJ URS.—Sir, immediately the complaint came against a peon he has been arrested. I am also aware that this peon cannot do it by himself. There must be others behind him. If this is agreed to, I would only request the hon. Members not to meddle with the investigation in any manner. Let them not say that the police are catching this man or that man. It is none of our business. If the police have to find out the culprit, sometimes on suspicion people may be interrogated. How can we say that this is the culprit, and that is not the culprit. You cannot bind the people who are entrusted with the responsibility of investigation and you cannot say 'don't do this or do this'. I have not done it and it is never my habit to do so. I would only appeal to the hon. Members not to talk like this or say that the police are harassing this man or that man. Sometimes it becomes necessary in the course of investigation, but it does not necessarily mean that everybody they approach will be declared a culprit and he will be punished. If you want the police to do a thing or not to do a thing, this amounts to gross interference and I am not prepared to do it.

The hon. Member Sri Shamanna was pleased to say that there are others who are responsible for this. I totally agree with him and that is why this investigation should go on unfettered and full freedom must be given to the C.I.D.

Matters under Rule 312

(i) *re* : nonfunctioning of Land Tribunal in Bangalore South Taluk.

ಅಧ್ಯಕ್ಷರು —ಈಗ ೩೧೨ನೇ ನಿಯಮದ ಪ್ರಕಾರ ಶ್ರೀಮಾನ್ ಪಿ. ರಾಂದೇವ್ ಅವರು ಮಾತನಾಡಬೇಕಾದ ವಿಷಯಕ್ಕೆ ಸಂಬಂಧಪಟ್ಟ ಮಾನ್ಯ ಮಂತ್ರಿಗಳು ಮೇಲ್ಮನೆಯಲ್ಲಿರುವುದರಿಂದ ಈಗ ಶ್ರೀಮಾನ್ ರಾಮಚಂದ್ರ ರೆಡ್ಡಿಯವರು ತಮ್ಮ ವಿಷಯದ ಬಗ್ಗೆ ಚರ್ಚೆ ಮಾಡಬಹುದು.

† ಶ್ರೀ ಬಿ. ವಿ. ರಾಮಚಂದ್ರರೆಡ್ಡಿ (ಪರ್ತೂರ). —ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ಮೊನ್ನೆ ತಾನೆ ಈ ಸದನದಲ್ಲಿ ಪ್ರಸ್ತಾಪಿಸಿದ ಹಾಗೆ ಭೂ ನ್ಯಾಯ ಮಂಡಲಿಗಳು ವಾರದಲ್ಲಿ ಐದು ದಿವಸ ಕೆಲಸ ಮಾಡುತ್ತಿವೆ ಎಂದು ಹೇಳಿದರು. ಆದರೆ ನಮ್ಮ ತಾಲ್ಲೂಕಿನ ವಿಷಯ ಹೇಳುವುದಾದರೆ, ಇಲ್ಲಿನ ಭೂ ನ್ಯಾಯ ಮಂಡಳಿಯು ಸಭೆಯು ಕಳೆದ ಆರು ತಿಂಗಳುಗಳಿಂದ ನಡದೇ ಇಲ್ಲ. ನಮ್ಮ ತಾಲ್ಲೂಕಿನಲ್ಲಿರತಕ್ಕ ಭೂ ನ್ಯಾಯ ಮಂಡಳಿಯ ಮೇಲೆ ಸರ್ಕಾರದವರು ಎಕ್ಸ್‌ಪೆರಿಮೆಂಟ್ ಮಾಡುತ್ತಿದ್ದಾರೆಯೇ ಹೇಗೆ ಎಂದು ತಿಳಿದುಕೊಳ್ಳಬೇಕಾಗಿದೆ. ಸರ್ಕಾರಕ್ಕೆ ಭೂನ್ಯಾಯ ಮಂಡಲಿಯನ್ನು ರಚನೆ ಮಾಡುವುದಕ್ಕೆ ಆಸಕ್ತಿ ಇದೆ,